# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 406
ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 10.12.2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು; ಅದರಲ್ಲಿ ವಿದ್ಯುತ್ ಚಾಲಿತ ಬಸ್ಸುಗಳ ಸಂಖ್ಯೆ ಎಷ್ಟು ಮತ್ತು ಡೀಸೆಲ್ ಬಸ್ಸುಗಳ ಸಂಖ್ಯೆ ಎಷ್ಟು;</td><td>ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ನವೆಂಬರ್-2025ರ ಅಂತ್ಯಕ್ಕೆ ಆಚರಣೆಯಲ್ಲಿರುವ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ವಿವರ ಕೆಳಕಂಡಂತಿದೆ:-
<table>
<tr><th>ಬಸ್ಸುಗಳ ವಿಧ</th><th>ಡಿಸೇಲ್ ಬಸ್‌ಗಳು</th><th>ವಿದ್ಯುತ್ ಚಾಲಿತ ಬಸ್ಸುಗಳು</th><th>ಒಟ್ಟು</th></tr>
<tr><td>ಸರ್ಕಾರಿ ಬಸ್ಸುಗಳ ಸಂಖ್ಯೆ</td><td>5361</td><td>1690</td><td>7051</td></tr>
<tr><td>ಖಾಸಗಿ ಬಸ್ಸುಗಳ ಸಂಖ್ಯೆ</td><td>15641</td><td>1952</td><td>17593</td></tr>
<tr><td>ಒಟ್ಟು</td><td>21002</td><td>3642</td><td>24644</td></tr>
</table></td></tr>
<tr><td>ಆ.</td><td>ಬಿ.ಎಂ.ಟಿ.ಸಿ ಬಸ್ಸುಗಳಲ್ಲಿ ಜಾಹಿರಾತು ಮೂಲಕ ಪ್ರಚಾರ ಮಾಡಲು ಯಾವ ಯಾವ ಮಾನದಂಡಗಳನ್ನು ಪರಿಗಣಿಸಲಾಗುವುದು; (ವಿವರ ನೀಡುವುದು)</td><td rowspan="2">ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಸಾರಿಗೇತರ ಆದಾಯವನ್ನು ಕ್ರೋಢೀಕರಿಸಲು ಬಸ್ಸುಗಳ ಮೇಲೆ ಜಾಹೀರಾತು ಪ್ರದರ್ಶಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಗೆ ನಿಗದಿತ ಅವಧಿಗೆ ಹಾಗೂ ಇತರೆ ನಿಬಂಧನೆಗಳಿಗೆ ಒಳಪಟ್ಟು ಪರವಾನಗಿ ನೀಡುವ ಜಾಹೀರಾತು ಪದ್ಧತಿ ಜಾರಿಯಲ್ಲಿರುತ್ತದೆ.<br><br>ಟೆಂಡರ್‌ನಲ್ಲಿ ಅತಿ ಹೆಚ್ಚು ಬಿಡ್ (H1) ಮಾಡಿದ ಹಾಗೂ ನಿಗದಿತ ಇ.ಎಂ.ಡಿ ಮೊತ್ತ ಹಾಗೂ ಇನ್ನಿತರ ಅವಶ್ಯಕ ದಾಖಲಾತಿಗಳನ್ನು ಸಲ್ಲಿಸಿದವರನ್ನು ಆಯ್ಕೆಮಾಡಲಾಗುತ್ತದೆ. ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಪಾವತಿಸಿ ಸಂಸ್ಥೆಯೊಂದಿಗೆ ನಿಗದಿತ ಅವಧಿಗೆ ಬಸ್ಸುಗಳ ಮೇಲೆ ಜಾಹೀರಾತು ಪ್ರದರ್ಶಿಸಲು ಕರಾರು ಒಪ್ಪಂದವನ್ನು ಮಾಡಿಕೊಂಡು, ಕರಾರು ನಿಯಮಾವಳಿಯಂತೆ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ.<br><br>ಮುಂದುವರೆದು, ಪರವಾನಗಿ ಶುಲ್ಕದ ಜೊತೆಗೆ ಜಾಹೀರಾತು ಪ್ರದರ್ಶಿಸಲಾಗುವ ಪ್ರತಿ ಬಸ್ಸುಗಳಿಗೆ ಅನ್ವಯವಾಗುವ ಇತರೆ ಶುಲ್ಕಗಳನ್ನು ಸಹ ಪಾವತಿಸಬೇಕಾಗಿರುತ್ತದೆ. ಸಂಸ್ಥೆಯ ಬಸ್ಸುಗಳ ಮೇಲೆ ಜಾಹಿರಾತು ಪ್ರದರ್ಶಿಸುತ್ತಿರುವುದರಿಂದ ಸಂಸ್ಥೆಗೆ ಸಂದಾಯವಾಗುತ್ತಿರುವ ಆದಾಯದ ವಿವರ ಕೆಳಕಂಡಂತಿದೆ:-
<table>
<tr><th>ಕ್ರ ಸಂ</th><th>ಪರವಾನಗಿ ದಾರರ ಹೆಸರು</th><th>ಅವಧಿ</th><th>ಒಟ್ಟು ಬಸ್ಸುಗಳು</th><th>ಪ್ರತಿ ಮಾಹೆಗೆ ಪ್ರತಿ ಬಸ್ಸಿಗೆ (ರೂ.ಗಳಲ್ಲಿ)</th><th>ಬಸ್ಸಿನ ಮಾದರಿ ಮತ್ತು ಸುತ್ತಳತೆ</th></tr>
<tr><td>1</td><td>ಮೇ||ಸಾಯಿ ಅಡ್ವರ್ಟೈಸರ್</td><td>2025-2029</td><td>3000</td><td>12616/-</td><td>ಸಾಮಾನ್ಯ ಬಸ್ಸುಗಳು 350.ಚ.ಅಡಿ</td></tr>
</table></td></tr>
<tr><td>ಇ.</td><td>ಬಿ.ಎಂ.ಟಿ.ಸಿ ಸಾರಿಗೆ ಬಸ್ಸುಗಳ ಮೇಲೆ ಜಾಹಿರಾತು ಮಾಡುವುದರಿಂದ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತಿದೆ; (ವಿವರ ನೀಡುವುದು)</td></tr>
</table>

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><td>2</td><td>ಮೇ||ಸೈನ್ ಪೋಸ್ಟ್</td><td>2025-2028</td><td>400</td><td>25255/-</td><td>ವೋಲ್ವೋ ಬಸ್ಸುಗಳು 430 ಚ.ಅಡಿ (ಅಂತರಾಷ್ಟ್ರೀಯ ವಿಮಾನ ನಿಲಾಣ ಹಾಗೂ ಎಂ.ಎನ್.ಸಿ ಕಂಪನಿಗಳಿಗೆ ಸಾರಿಗೆ ಸೌಲಭ್ಯ ಒದಗಿಸುವ ಕಾರಣ ಜಾಹೀರಾತಿನ ಶುಲ್ಕದಲ್ಲಿ ಹೆಚ್ಚಳವಿರುತ್ತದೆ)</td></tr>
</table>
</td></tr>
<tr><td>ಈ.</td><td>ಬೆಂಗಳೂರು ಜಿಲ್ಲೆಗೆ ಬಸ್ಸುಗಳ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br>ಬಂದಿದ್ದಲ್ಲಿ ಸರ್ಕಾರ ಹೊಸ ಬಸ್ಸುಗಳನ್ನು ಖರೀದಿಸಲು ಕ್ರಮ ಕೈಗೊಂಡಿದೆಯೇ? (ವಿವರ ನೀಡುವುದು)</td><td>
ಸಾರಿಗೆ ನಿಗಮಗಳಿಗೆ 2025-26ನೇ ಸಾಲಿನ ಆಯವ್ಯಯದಲ್ಲಿ 2000 ಡೀಸಲ್ ಬಸ್‌ಗಳನ್ನು ಖರೀದಿಸುವ ಘೋಷಣೆ ಮಾಡಲಾಗಿದ್ದು, ನಿಗಮವಾರು ಈ ಕೆಳಕಂಡಂತೆ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ.
<table>
<tr><th>ನಿಗಮ/ಸಂಸ್ಥೆ</th><th>ಬಸ್ಸುಗಳ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>900</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>700</td></tr>
<tr><td>ಕ.ಕ.ರ.ಸಾ.ನಿಗಮ</td><td>400</td></tr>
<tr><td>ಒಟ್ಟು</td><td>2000</td></tr>
</table>
ಮೇಲ್ಕಂಡ ಕೋಷ್ಟಕದನ್ವಯ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಒಟ್ಟು 650 ಬಸ್ಸುಗಳನ್ನು ಖರೀದಿಸುವಂತೆ ಆರ್ಥಿಕ ಇಲಾಖೆಯು ಸೂಚಿಸಿದ್ದು, ಅದರಂತೆ ಕ.ರಾ.ರ.ಸಾ.ನಿಗಮಕ್ಕೆ ಅವಶ್ಯವಿರುವ 500 ಡೀಸೆಲ್ ಮಾದರಿಯ ಬಸ್ಸುಗಳನ್ನು ಹಾಗೂ 144 ನಗರ ಸಾರಿಗೆ ಮಾದರಿ ವಾಹನಗಳನ್ನು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಹಾಗೂ ಪ್ರಸ್ತುತ ಸಾಲಿನಲ್ಲಿ ಇಲ್ಲಿಯವರೆಗೆ 05 ವೋಲ್ವೋ ಮಲ್ಟಿ ಆಕ್ಸಲ್ ಸೀಟರ್ ಹಾಗೂ 05 ಮಲ್ಟಿ ಆಕ್ಸಲ್ ಸ್ಲೀಪರ್ ವಾಹನಗಳನ್ನು ಖರೀದಿಸಲಾಗಿದೆ ಹಾಗೂ 60 ಸಂಖ್ಯೆಯ ನಾನ್ ಎಸಿ ಸ್ಲೀಪರ್ (ಪಲ್ಲಕ್ಕಿ) ವಾಹನಗಳಿಗೆ ಖರೀದಿ ಆದೇಶ ಬಿಡುಗಡೆ ಮಾಡಲಾಗಿದ್ದು, ಮಾರ್ಚ್-2026ರೊಳಗೆ ಸೇರ್ಪಡೆಗೊಳಿಸಲಾಗುವುದು.<br><br>
ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2023-24ರಿಂದ 2025-26ನೇ ಸಾಲಿನವರೆಗೆ ಈ ಕೆಳಕಂಡಂತೆ ಬಸ್‌ಗಳನ್ನು ಖರೀದಿಸಲಾಗಿದೆ:-
<table>
<tr><th>ಸಂಸ್ಥೆ/ ನಿಗಮ</th><th>2023-24</th><th>2024-25</th><th>2025-26</th></tr>
<tr><td>ಕ.ರಾ.ರ.ಸಾ.ನಿಗಮ</td><td>440</td><td>698</td><td>10</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>20-ಡಿಸೇಲ್</td><td>820- ಡಿಸೇಲ್</td><td>0</td></tr>
<tr><td></td><td>325-ಇ.ವಿ</td><td>755- ಇ.ವಿ</td><td>339- ಇ.ವಿ</td></tr>
<tr><td>ಒಟ್ಟು</td><td>785</td><td>2273</td><td>349</td></tr>
</table>
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

**ಕ.ರಾ.ರ.ಸಾ.ನಿಗಮದ** ಬೆಂಗಳೂರು ಜಿಲ್ಲೆಗೆ ಒಳಪಡುವ ಬೆಂಗಳೂರು ಕೇಂದ್ರೀಯ ಹಾಗೂ ಬೆಂಗಳೂರು ದಕ್ಷಿಣ ವಿಭಾಗಗಳಿಗೆ ಕಳೆದ 3 ವರ್ಷಗಳಲ್ಲಿ ಒಟ್ಟು 185 ಹೊಸ ವಾಹನಗಳನ್ನು ಒದಗಿಸಿದ್ದು ವಿವರ ಕೆಳಕಂಡಂತಿದೆ:-

| **ವಿಭಾಗ** | **2023-24** | **2024-25** | **2025-26** |
|---|---|---|---|
| ಬೆಂಗಳೂರು (ಕೇಂದ್ರೀಯ) | 51 | 65 | 3 |
| ಬೆಂಗಳೂರು (ದಕ್ಷಿಣ) | 32 | 34 | 0 |
| **ಒಟ್ಟು** | **83** | **99** | **3** |

ಸದರಿ ವಿಭಾಗಗಳಲ್ಲಿ ಒಟ್ಟು 1038 ಅನುಸೂಚಿಗಳನ್ನು 1153 ವಾಹನಗಳಿಂದ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಅವಶ್ಯಕತೆಗನುಗುಣವಾಗಿ ಹೊಸ ವಾಹನಗಳನ್ನು ಒದಗಿಸಲು ಪರಿಶೀಲಿಸಲಾಗುವುದು.

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25.0 ಕಿ.ಮೀ.ವರೆಗೆ ಕಾರ್ಯಾಚರಣೆ ವ್ಯಾಪ್ತಿಯನ್ನು ಹೊಂದಿದ್ದು, ಬೆಂಗಳೂರು ನಗರ ಹಾಗೂ ಹೊರ ವಲಯದ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುಲಭ, ಸುರಕ್ಷಿತ ಸಾರಿಗೆ ಸೇವೆಯನ್ನು ಒದಗಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 1,817 ಮಾರ್ಗಗಳಲ್ಲಿ 6,274 ಅನುಸೂಚಿಗಳನ್ನು 65,934 ಸುತ್ತುವಳಿಗಳೊಂದಿಗೆ 13.00 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 44 ಲಕ್ಷ ಪ್ರಯಾಣಿಕರು ಸಂಸ್ಥೆಯ ಸಾರಿಗೆಗಳಲ್ಲಿ ಪ್ರಯಾಣಿಸುತ್ತಿದ್ದಾರೆ.

ಸಂಸ್ಥೆಯಲ್ಲಿ ನವೆಂಬರ್-2025ರ ಅಂತ್ಯಕ್ಕೆ 7051 ಬಸ್ಸುಗಳು ಕಾರ್ಯಾಚರಣೆಯಲ್ಲಿರುತ್ತವೆ ಹಾಗೂ ಕೇಂದ್ರ ಸರ್ಕಾರದ PM e- DRIVE ಯೋಜನೆಯಡಿ 4500 ವಿದ್ಯುತ್ ಚಾಲಿತ ಬಸ್‌ಗಳನ್ನು ಜಿಸಿಸಿ ಮಾದರಿಯಲ್ಲಿ ಒದಗಿಸಲು ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಸಂಖ್ಯೆ: ಟಿಡಿ 200 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು